Sale of 'Milo' in Black Market

58. **Sri D. B. KALMANKAR** (Aland) [On behalf of SRI B. P. GANGADHAR (Tumkur)].—

Will the Minister of State for Food and Civil Supplies be pleased to state :—

(*a*) the quantity of milo supplied to Tumkur District per month and the rate at whith it was supplied;

(*b*) whether it is a fact that the licensing authority of Tumkur district has been showing discrimination in issuing special permits ;

(*c*) whether Government is aware that the special permit holders are selling the milo in the open market at an exhorbitant price ;

(*d*) the action taken by Government on the representations submitted by the public of Tumkur in this regard ?

Sri B. VITHALDAS SHETTY (Minister of State for Food and Civil Supplies).—

(*a*) Milo is not being supplied to Tumkur District evey month, but as and wben allotments of milo are received from the Government of India, sub-allot nents are made to the Districts taking into consideration their requirements.

The following quantities of milo were however supplied to Tumkur district during August, September and October 1969 to be utilised as per the monthly quota fixed for the district.

August	1969	...	9,453	quintals
September	1969	...	8,948	,,
October	1969	...	13,281	,,
	Total	...	31,680	,,
Wholesale rate		...	Rs. 58	
Retail rate		...	Rs. 61	

(*b*) No.

(*c*) No.

(*d*) No representations have been received from the public in this behalf so far and hence the question of taking action does not arise.

Sri D. B. KALMANKAR.—May I know the names of those to whom special permits were issued in August, September and October, 1969 ?

†**Sri B. VITHALDAS SHETTY.**—No Special permits have been issued. But special quota has been given to that particular District. But the list to whom it was issued is not before me.

Sri D. B. KALMANKAR.—Is it not a fact that the quota was issued to the State for every three months from the Central Government ? If so, when it was issued ?

Sri B. VITHALDAS SHETTY.—The quota has been issued in August September, October, November, December, January and April and May.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತುಮಕೂರು ಜಿಲ್ಲೆಯ ಬಹುಭಾಗಗಳಲ್ಲಿ ಅಭಾವ ಇದ್ದುದರಿಂದ ಆಲ್ಲಿಗೆ ಹೆಚ್ಚು ಮಿಲೋ ಒದಗಿಸಬೇಕೆಂದು ಜನರು ಕೇಳಿಕೊಂಡರೂ, ಅದನ್ನು ಒದಗಿಸದಿರಲು ಕಾರಣವೇನು ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಸರ್ಕಾರದಲ್ಲಿ ಎಷ್ಟು ಸ್ಟಾಕ್ ಇದೆಯೋ ಅದಕ್ಕನುಸಾರವಾಗಿ ತುಮಕೂರು ಜಿಲ್ಲೆಗೆ ಮತ್ತು ಉಳಿದ ಜಿಲ್ಲೆಗಳಿಗೆ ಮಿಲೋ ಒದಗಿಸಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಹೆಚ್ಚು ಸ್ಟಾಕ್ ಇದೆ ಎಂದು ಹೇಳಿದ್ದೀರಿ. ಈಗ ಎಲ್ಲೆಲ್ಲ ಅಭಾವ ಪರಿಸ್ಥಿತಿ ಇದೆಯೋ, ಅಲ್ಲಿಗೆ ಕೂಡಲೇ ಡೆಪ್ಯುಟಿ ಕಮಿಷನರ್ ಕೇಳಿರತಕ್ಕ ಕೋಟಾ ಕಳಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಮಿಲೋ ರಾಜ್ಯದಲ್ಲಿ ಸಾಕಷ್ಟು ಸ್ಟಾಕ್ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಭಾಸ್ಕರಶೆಟ್ಟರ ಪ್ರಶ್ನೆಗೆ ಉತ್ತರವಾಗಿ 1,975 ಟನ್ ಇದೆ ಎಂದು ಹೇಳಿದ್ದೀರಿ. ಅದನ್ನು ಕೂಡಲೇ ವಿತರಣೆ ಮಾಡುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಆ ಸ್ಟಾಕ್ ಮುಗಿದು ಹೋಗಿದೆ.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಮೈಸೂರು ಸಂಸ್ಥಾನದಲ್ಲಿ ಅನೇಕ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ತಲೆದೋರಿರುವುದರಿಂದ ಇಲ್ಲಿಯವರೆಗೆ ಸ್ಟಾಕ್ ಇದ್ದಂತಹ, ಕೊಳೆತು ಹೋದಂತಹ ಧಾನ್ಯಗಳನ್ನು ಹಂಚಿದೆ, ಹೊಸ ಧಾನ್ಯವನ್ನು ಹಂಚಲು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಕೊಳೆತು ಹೋದ ಧಾನ್ಯ ವಿಶೇಷ ದಾಸ್ತಾನು ಇಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ,—ದೇಶದಲ್ಲಿ ಎಲ್ಲಾ ಕಡೆ ಕ್ಷಾಮ ಇರುವುದರಿಂದ, ನಮ್ಮಿಡಿ ಕೊಟ್ಟು ಜನರಿಗೆ ಈ ಮಿಲೋವನ್ನು ಒದಗಿಸುವ ಏರ್ಪಾಡು ಮಾಡುತ್ತೀರಾ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ದೇಶದಲ್ಲೆಲ್ಲಾ ಕ್ಷಾಮ ಇದೆ ಎಂದು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಕೆಲವು ಜಿಲ್ಲೆಗಳಲ್ಲಿ ಇದೆ. ಅಲ್ಲಿಗೆ ಸರ್ಕಾರದವರು ಸ್ಟಾಕ್ ನೋಡಿಕೊಂಡು ಯಾವ ವಿಧದಲ್ಲಿ ಸಹಾಯ ಮಾಡಬೇಕೋ, ಅದನ್ನು ಮಾಡುತ್ತೇವೆ.

1-30 P.M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಈಗ ನಮ್ಮ ರಾಜ್ಯದಲ್ಲಿ ಅಕ್ಕಿಯಾಗಲೀ, ರಾಗಿಯಾಗಲೀ, ಜೋಳವಾಗಲೀ, ಮಾರ್ಕೆಟ್ ರೇಟಿಗೂ ತಾವು ಮಾರತಕ್ಕ ರೇಟಿಗೂ ಹೆಚ್ಚು ವ್ಯತ್ಯಾಸ ಇಲ್ಲದೆ ಸ್ವಲ್ಪ ಹೆಚ್ಚು ಕಡಿಮೆ ಒಂದೇ ರೇಟು ಇರುವುದರಿಂದ ಅದರ ತೊಂದರೆ ಅಷ್ಟಾಗಿ ಇಲ್ಲ, ಆದರೆ ಜನಗಳಿಗೆ ಮಿಲೋ ಸಿಕ್ಕುವುದು ಕಷ್ಟವಾಗಿರುವುದರಿಂದ ಅದರ ಸ್ಪೆಷರ್ ಕೋಟಾವನ್ನು ಇಂಡಿಯಾ ಸರ್ಕಾರದಿಂದ ತರಿಸಿ ಅಭಾವ ಪ್ರದೇಶಗಳಿಗೆ ಒದಗಿಸುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಅಭಾವ ಪ್ರದೇಶಗಳಲ್ಲಿ ಜನಗಳು ಅಕ್ಕಿಯನ್ನು ವಿಕ್ರಯಿಸುವಂಥಾ ಶಕ್ತಿಯನ್ನುಂಟು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅಭಾವ ಪ್ರದೇಶಗಳಿಗೆ ಹಣವನ್ನು ಕೊಟ್ಟು ಜನಗಳಿಗೆ ಕೆಲಸವನ್ನು ಒದಗಿಸಿ ಅವರು ಅಕ್ಕಿಯನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿಯನ್ನುಂಟುಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಸರ್ಕಾರದವರು ಒಂದು ತಾಲ್ಲೂಕಿಗೆ ಸ್ಕೇರ್ಸಿಟಿ ವರ್ಕ್ಸ್‌ಗಾಗಿ 50 ಸಾವಿರ ರೂಪಾಯಿಗಳನ್ನು ಒದಗಿಸುತ್ತಾರೆ. ಅಲ್ಲಿ ಒಂದು ಲಕ್ಷ ಜನಗಳು ಇದ್ದಾರೆ. 50 ಸಾವಿರ ರೂಪಾಯಿಗಳನ್ನು ಹಂಚಿದರೆ ಒಬ್ಬೊಬ್ಬರಿಗೆ ಒಂದು ರೂಪಾಯೆ ಕೂಡ ಬರುವುದಿಲ್ಲ. ಹೀಗಿರುವಾಗ ಇಡೀ ತಾಲ್ಲೂಕಿನ ಜನಗಳಿಗೆ ಅಕ್ಕಿ ಕೊಂಡುಕೊಳ್ಳುವ ಶಕ್ತಿಯನ್ನು ಹೇಗೆ ಉಂಟು ಮಾಡುತ್ತೀರಿ ? ಈ ದೃಷ್ಟಿಯಿಂದ ತಾವು ಇಂಡಿಯಾ ಸರ್ಕಾರಕ್ಕೆ ಬರೆದು ಹೆಚ್ಚು ಮೈಲೋ ತರಿಸಿ ಜನಗಳಿಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಬಿ. ವಿಠಲದಾಸ್ ಶೆಟ್ಟಿ.—ಮೈರೋ ಬೇಕು ಎಂದು ನಾವು ಇಂಡಿಯಾ ಸರ್ಕಾರಕ್ಕೆ ಬರೆದಿದ್ದೆವು, ಅವರು ತಮ್ಮಲ್ಲಿ ದಾಸ್ತಾನು ಇಲ್ಲ ಕೊಡುವುದಕ್ಕೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ.

Loan for Upper Krishna Project from World Bank

64. Sri M. NAGAPPA (Raichur).—

Will the Chief Minister refer to replies furnished to starred Question No. 95. (518) (Sixth Session) and to state :—

(*a*) whether the World Bank has agreed to advance loan for Upper Krishna Project ;

(*b*) if not, the reasons for delay ?

Sri VEERENDRA PATIL (Chief Minister).—

(*a*) No communication is received from Government of India so far in this matter.

(*b*) Does not arise in view of reply to (*a*) above.

ಶ್ರೀ ಎಂ. ನಾಗಪ್ಪ.—ಸ್ಪಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿಶ್ವ ಬ್ಯಾಂಕಿನವರು ಸಾಲ ನೀಡುವ ಬಗ್ಗೆ ಭಾರತ ಸರ್ಕಾರದವರಿಂದ ಈ ವರೆಗೆ ಯಾವ ಕಾಗದ ಪತ್ರವೂ ಬಂದಿರುವುದಿಲ್ಲ ಎಂದು ಉತ್ತರವನ್ನು ಕೊಟ್ಟಿದ್ದೀರಿ, ತಾವು ಇದುವರೆಗೆ ದೆಹಲಿಗೆ ಅನೇಕ ಸಲ ಹೋಗಿ ಬರುತ್ತಿದ್ದೀರಿ, ಇದರ ಬಗ್ಗೆ ಕೇಂದ್ರ ಸರ್ಕಾರದವರೊಡನೆ ಮಾತುಕತೆ ನಡೆಸಬೇಕೆಂಬ ಆಸಕ್ತಿ ಇದೆಯೇ ಅಥವಾ ಇಲ್ಲವೇ, ಈ ಪ್ರಾಜೆಕ್ಟನ್ನು ಕಾರ್ಯಗತ ಮಾಡಬೇಕೆಂದು ಆಸಕ್ತಿ ಸರ್ಕಾರಕ್ಕೆ ಇದೆಯೇ ಹೇಗೆ ? ಹಾಗೊಂದು ವೇಳೆ ಈ ಬಗ್ಗೆ ತಮಗೆ ಆಸಕ್ತಿ ಇದ್ದರೆ ತಾವು ಅನೇಕ ಸಲ ದೆಹಲಿಗೆ ಹೋದಾಗ ಅಲ್ಲಿ ಕೇಂದ್ರ ಸರ್ಕಾರದವರೊಡನೆ ಏತಕ್ಕೆ ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲ ?

†ಶ್ರೀ ವೀರೇಂದ್ರ ಪಾಟೀಲ್.—ಇದರ ಬಗ್ಗೆ ನಾವು ಕೇಂದ್ರ ಸರ್ಕಾರದವರೊಡನೆ ವ್ಯವಹಾರ ಮಾಡಿದ್ದೇವೆ. ನ್ಯಾಷನಲ್ ಡೆವಲಪ್‌ಮೆಂಟ್ ಟೀಮಿನವರು ಇಲ್ಲಿಗೆ ಬಂದು ಕೆಲವು ಇನ್‌ಫರ್-ಮೇಷನ್‌ಗಳನ್ನು ಕೇಳಿದ್ದಾರೆ. ಅದನ್ನು ಕೊಟ್ಟಿದೆ. ಮತ್ತು ಕೆಲವು ಪ್ರತಿನಿಧಿಗಳು ಇಲ್ಲಿಗೆ ಬಂದು ಅಧಿಕಾರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಮತ್ತು ಅವರಿಗೆ ಬೇಕಾದ ಇನ್‌ಫರ್‌ಮೇಷನ್ನೆಲ್ಲಾ ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ವರ್ಲ್ಡ್ ಬ್ಯಾಂಕಿನಿಂದ ಇನ್ನೂ ಉತ್ತರ ಬಂದಹಾಗೆ ಕಾಣುವುದಿಲ್ಲ. ಮತ್ತು ಈ ಬಗ್ಗೆ ಇಂಡಿಯಾ ಸರ್ಕಾರದವರು ಯಾವ ನಿರ್ಣಯವನ್ನೂ ತೆಗೆದು ಕೊಂಡಿಲ್ಲ. ವರ್ಲ್ಡ್ ಬ್ಯಾಂಕಿನವರು ಸಹಾಯ ಕೊಡುವ ತನಕ ಕೈಕಟ್ಟಿ ಕುಳಿತುಕೊಳ್ಳಬೇಕಾಗಿಲ್ಲ. ಈ ಪ್ರಾಜೆಕ್ಟಿನ ಕೆಲಸ ರಭಸದಿಂದ ನಡೆಯುತ್ತಿದೆ.

ಶ್ರೀ ಎಂ. ನಾಗಪ್ಪ.—ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕೆಲಸ ನಡೆಸುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ತಾವು ಹಿಂದೆ ಕೊಟ್ಟಿದ್ದೀರಿ, ಈ ದಿವಸ ಕೂಡ ಅದನ್ನು ಹೇಳುತ್ತಿದ್ದೀರಿ, ಇದರ ಬಗ್ಗೆ ನಮಗೆ ವಿಶ್ವಾಸ ಕೂಡ ಇದೆ. ಆದರೆ ಈಗ ಅಲ್ಲಿ ಕೆಲಸ ನಡೆಯತಕ್ಕಂಥಾ ಸ್ಥಿತಿಯನ್ನು ನೋಡಿದರೆ ಈ ಪ್ರಾಜೆಕ್ಟ್ 1976ನೇ ಇಸವಿಗೆ ಯಾವ ತಾರೀಖಿಗೆ ಮುಗಿಯುತ್ತದೆ ಎಂದು ತಾವು ಒಂದು ನಿರೀ ಜ್ಞೆಯನ್ನು ಇಟ್ಟುಕೊಂಡಿದ್ದೀರೋ ಆ ವೇಳೆಗೆ ಇದು ಮುಗಿಯುವುದಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಅದಕ್ಕಾಗಿ ತೀವ್ರ ಗತಿಯಲ್ಲಿ ಈ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡಬೇಕಾಗಿದ್ದರೆ ತಾವು ವರ್ಲ್ಡ್ ಬ್ಯಾಂಕಿನಿಂದ ಸಾಲವನ್ನು ಪಡೆಯುವುದಕ್ಕೆ ಪ್ರಯತ್ನಮಾಡಿ ಆದಷ್ಟು ಜಾಗ್ರತೆ ಸಾಲವನ್ನು ಮಂಜೂರು ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?